# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-08

Cw-08

ಸಾಕ್ಷಿದಾರರ ಹೆಸರುಃ ಶ್ರೀ ಫಕ್ಕೀರಪ್ಪ ಸೂರಣಗಿ

ತಂದೆಃಗಂಡನ ಹೆಸರುಃ ಶ್ರೀ ಯಲ್ಲಪ್ಪ

ವಯಸ್ಸುಃ 54 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಮೃತ ಕರಿಯಲ್ಲಪ್ಪ ನನ್ನ ಅಣ್ಣ. ಆತನು ಈಗ್ಗೆ 2 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸದರಿ ನನ್ನ ಅಣ್ಣನ ಹೆಸರಿನಲ್ಲಿ ಸರ್ವೇ ನಂಬರ್ 12 ರಲ್ಲಿ ಒಟ್ಟು 2 ಎಕರೆ ಜಮೀನು ಇತ್ತು. ಅದರ ಪೈಕಿ ನನ್ನ ಅಣ್ಣನು ಸರ್ಕಾರಿ ಶಾಲೆಗೆ 28 ಗುಂಟೆ ಜಮೀನನ್ನು ದಾನ ಮಾಡಿರುತ್ತಾರೆ. ಸದರಿ ಜಮೀನಿನ ಪೈಕಿ 03 ಗುಂಟೆ ಜಮೀನನ್ನು ನಮ್ಮೂರ ಪಂಚಾಯತಿ ಕಟ್ಟಡ ಕಟ್ಟುವ ಸಲುವಾಗಿ ನಮ್ಮ ಅಣ್ಣನು ದಾನ ಮಾಡಿರುತ್ತಾರೆ. ನಂತರ ಆರೋಪಿತರು ಮತ್ತು ಚಾಸಾ-1, 4 ಮತ್ತು 5 ರವರ ನಡುವೆ ಪಂಚಾಯತಿ ಕಟ್ಟಡ ಕಟ್ಟುವ ಸಲುವಾಗಿ ಜಗಳ ಆಗಿರುವ ವಿಚಾರ ನನಗೆ ಗೊತ್ತಾಯಿತು. ನಾನು ಪೊಲೀಸರ ಮುಂದೆ ಘಟನೆ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ**

2. ನನ್ನ ಅಣ್ಣನಿಗೆ ಸರ್ವೇ ನಂಬರ್ 12 ರಲ್ಲಿ ಒಟ್ಟು 2 ಎಕರೆ ಜಮೀನು ಇತ್ತು ಎಂದು ತೋರಿಸಲು ಪೊಲೀಸರಿಗೆ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ನನ್ನ ಅಣ್ಣನು ಸದರಿ ಜಮೀನಿನ ಪೈಕಿ 28 ಗುಂಟೆ ಜಮೀನನ್ನು ಶಾಲಾ ಕಟ್ಟಡಕ್ಕೆ ಮತ್ತು 03 ಗುಂಟೆ ಜಮೀನನ್ನು ಪಂಚಾಯತಿ

ಕಟ್ಟಡ ಕಟ್ಟಲು ದಾನವಾಗಿ ಕೊಟ್ಟ ಬಗ್ಗೆ ಪೊಲೀಸರಿಗೆ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ನಾವು ಆ ರೀತಿ ಪೊಲೀಸರಿಗೆ ಯಾವ ದಾಖಲಾತಿಗಳನ್ನು ಕೊಡದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.